

> ನನ್ನ ಸಾಹಿತ್ಯ ಮತ್ತು ಸಿನಿಮಾಗಳ ಸೃಷ್ಟಿಯಲ್ಲಿ ಅನುಭವ ಮತ್ತು ವೈಚಾರಿಕತೆಗಳ ಸಾವಯವ ಸಂಬಂಧವನ್ನು ಸಾಧಿಸಲು ಸದಾ ಪ್ರಯತ್ನಿಸುತ್ತೇನೆ. ಇದು ಭಾವುಕ ಮತ್ತು ಬೌದ್ಧಿಕ ಏಕತೆಯ ಪ್ರಾಮಾಣಿಕ ಪ್ರಕ್ರಿಯೆ. ಕುವೆಂಪು ಅವರು ಹೇಳುವಂತೆ ಇದು 'ಭಾವಬುದ್ಧಿಗಳ ವಿದ್ಯುದಾಲಿಂಗನ'.

ಸಾರ್ವಜನಿಕ ನಡವಳಿಕೆ ಬಗ್ಗೆ ಹೇಳಿದೆ. ಸಾರ್ವಜನಿಕ ಸಭ್ಯತೆಯು ಎಲ್ಲರ ನಡವಳಿಕೆಯಾಗಬೇಕೆಂದು ನಂಬಿದವನು ನಾನು. ಈ ವಿಷಯದಲ್ಲಿ ಪಕ್ಷಭೇದ ಇಲ್ಲ. ಇನ್ನು ಕಾಂಗ್ರೆಸ್ ಪಕ್ಷದ ಎಲ್ಲ ನೀತಿಗಳನ್ನು ನಾನು ಒಪ್ಪಿಕೊಂಡವನಲ್ಲ. ವಿದ್ಯಾರ್ಥಿ ದೆಸೆಯಿಂದಲೇ ನಾನು ಕಾಂಗ್ರೆಸ್ ವಿರೋಧಿಯಾಗಿದ್ದೆ. ಆಗ ಪ್ರಜಾ ಸೋಷಲಿಸ್ಟ್ ಪಾರ್ಟಿ ಪರ ಚುನಾವಣಾ ಪ್ರಚಾರವನ್ನೂ ಮಾಡಿದ್ದೆ. ಇಷ್ಟಾಗಿಯೂ ನೆಹರೂ ಅವರ ಜಾತ್ಯತೀತ ಮತ್ತು ವೈಜ್ಞಾನಿಕ ಮನೋಧರ್ಮವನ್ನು ಮೆಚ್ಚಿಕೊಂಡಿದ್ದೆ (ಈಗ ಕೂಡ). ಮುಂದೊಮ್ಮೆ ಇಂದಿರಾ ಗಾಂಧಿಯವರು ತಂದ ತುರ್ತು ಪರಿಸ್ಥಿತಿಯನ್ನು ವಿರೋಧಿಸಿದ್ದೆ. ಸಂಜಯ ಗಾಂಧಿ ಕುರಿತು 'ಒಂದೂರಲ್ಲೊಬ್ಬ ಯುವರಾಜ' ಎಂಬ ಅನ್ಯೋಕ್ತಿ ವಿಧಾನದ ಕತೆ ಬರೆದಿದ್ದೆ. ಆದರೆ, ಇಂದಿರಾ ಗಾಂಧಿಯವರು ತಂದ ಬ್ಯಾಂಕ್ ರಾಷ್ಟ್ರೀಕರಣವೇ ಮುಂತಾದ ಬಡವರ ಪರ ಯೋಜನೆಗಳ ಬೆಂಬಲಿಗನೂ ಆಗಿದ್ದೆ. ಇದೇ ಕಾಂಗ್ರೆಸ್ ಪಕ್ಷವು ರಾಷ್ಟ್ರೀಕರಣ ನೀತಿಯಿಂದ ದೂರ ಸರಿದು ಖಾಸಗೀಕರಣ ನೀತಿಯನ್ನು ಜಾರಿಗೆ ತಂದದ್ದನ್ನು ಟೀಕಿಸಿದ್ದೆ. ಖಾಸಗೀಕರಣ, ಉದಾರೀಕರಣದ ಜನ್ಮದಾತರು ಕಾಂಗ್ರೆಸ್ಸಿನವರೆಂದೂ, ಅದನ್ನು ಮದೋನ್ಮತ್ತ ಯೌವನಿಗನಾಗಿ ಬೆಳೆಸಿದವರು ಇಂದಿನ ಬಿ.ಜೆ.ಪಿಯವರೆಂದು ಈಗಲೂ ಹೇಳುತ್ತಿದ್ದೇನೆ. ಜಾತಿವಾದ ಮತ್ತು ಧಾರ್ಮಿಕ ಮೂಲಭೂತವಾದವನ್ನು ಯಾವುದೇ ಪಕ್ಷದವರು ಅಜೆಂಡ ಮಾಡಿಕೊಂಡರೂ ನನ್ನ ವಿರೋಧವಿದೆ. ಯಾವುದೇ ಧರ್ಮದವರು ಮೂಲಭೂತವಾದವನ್ನು ಪ್ರಯೋಗಿಸಿದರೂ ಪ್ರಚೋದಿಸಿದರೂ ಅದನ್ನು ನಾನು ವಿರೋಧಿಸುತ್ತೇನೆ. ಜಾತಿವಾದ ಮತ್ತು ಧಾರ್ಮಿಕ ಮೂಲಭೂತವಾದವನ್ನು ವಿರೋಧಿಸುವ ಪಕ್ಷ ಮತ್ತು ವ್ಯಕ್ತಿಗಳ ಬಗ್ಗೆ ಸಹಮತ ಹೊಂದಿರುತ್ತೇನೆ ಹಾಗೂ ನೈತಿಕ ಬೆಂಬಲ ಕೊಡುತ್ತೇನೆ. ಇದು ವಿಷಯಾಧಾರಿತವೇ ಹೊರತು ವಕ್ತಾರಿಕೆ ಅಲ್ಲ. ನಾವು ಸಾಹಿತಿಗಳು ಅಥವಾ ಬುದ್ಧಿಜೀವಿಗಳೆನ್ನಿಸಿಕೊಂಡವರು ಯಾವುದೇ ಪಕ್ಷದ ಪೂರ್ಣ ವಕ್ತಾರರಾಗಬಾರದು. ಹಾಗೊಂದು ವೇಳೆ ನಿರ್ದಿಷ್ಟ ಪಕ್ಷದ ನೀತಿ–ನಿಲುವು ಪೂರ್ಣ ಒಪ್ಪಿಗೆಯಾದರೆ ಪೂರ್ಣವಾಗಿ ಪಕ್ಷಕ್ಕೆ ಸೇರಬೇಕು. ಇಲ್ಲದಿದ್ದರೆ ವಿಷಯಾಧಾರಿತ ಸಹಮತವಿದ್ದೂ ವಿಮರ್ಶಕರಾಗಿರಬೇಕು. ಹಾಗೆ ನೋಡಿದರೆ, ಎಲ್ಲ ಜಾತಿ, ಧರ್ಮ ಮತ್ತು ಪಕ್ಷಗಳಿಗೂ ಒಳವಿಮರ್ಶಕರ ಅಗತ್ಯವಿದೆ.

ಮೂಲತಃ ಸಾಹಿತ್ಯದ ವಿದ್ಯಾರ್ಥಿಯಾದ ನನಗೆ ಪಂಪ ಮಹಾಕವಿ ಮತ್ತು ಬಸವಣ್ಣನವರು, ಪ್ರಭುತ್ವ ಮತ್ತು ಸೃಜನಶೀಲತೆಯ ಸಂಬಂಧಾಂತರಗಳಿಗೆ ಇಂದಿಗೂ ಮಾದರಿ ಎನ್ನಿಸುತ್ತೆ. ನಿಮಗೆ